# Swami Vivekanandara Adyathmika Neleya Mathu

**Lohit .P**
Lecturer,
Department of kannada,
Akshara Institute of Management Studies,
Shivamogga ,Karnataka (state),
India.

ಅಜ್ಞಾನವೆಂಬ ಕತ್ತಲೆಯಿಂದ ದೂರನಾದ, ಸೂರ್ಯನಂತೆ ಹೊಳೆಯುವ ಆ ಪರತತ್ತ್ವವನ್ನು ನಾನು ತಿಳಿದುಕೊಂಡಿದ್ದೇನೆ. ಅವನನ್ನು ತಿಳಿದುಕೊಂಡರೆ ಮಾತ್ರ ವ್ಯಕ್ತಿಯೊಬ್ಬ ಮರಣವನ್ನು ಅತಿಕ್ರಮಿಸಬಲ್ಲ. ಬೇರೆ ದಾರಿ ಇಲ್ಲ. ಬೇರಾವ ದಾರಿಯೂ ಇಲ್ಲ. ಓ! ಅಮೃತ ಪುತ್ರರೇ!! ಸ್ವರ್ಗದಲ್ಲಿರುವ ದೇವತೆಗಳೂ ಕೂಡ ಇದನ್ನು ಕೇಳಲಿ' ಉಪನಿಷತ್ ಯುಗದ ಋಷಿ ಶ್ರೇಷ್ಠರ ಉದ್ಘೋಷಣೆ ಇದು. ಮನುಷ್ಯನ ನೈಜ ಸ್ವಭಾವದ ಪರಿಚಯದಿಂದ, ಆತನಲ್ಲಡಗಿರುವ ಸುಪ್ತವಾದ ಅನಂತ ಶಕ್ತಿಯ ಸ್ಪಷ್ಟ ಅರಿವಿನಿಂದ ಜೀವನದ ಅರ್ಥ ಉದ್ದೇಶಗಳ ತಿಳಿವಿನ ಬಗ್ಗೆ ನೀಡಿದಂಥ ಎಂಥ ಮಹಾ ಸಂದೇಶವಿದು! ಮನುಷ್ಯರೆಲ್ಲರೂ ಏರಬಹುದಾದ ಎತ್ತರವನ್ನು ಕುರಿತ ಹಾಗೂ ಅತ್ಯುನ್ನತ ಸಾಧನೆಯ ಶಿಖರವನ್ನು ಏರಲು ಬೇಕಾದ ಧೈರ್ಯ, ಸ್ಥೈರ್ಯ, ಸ್ಫೂತರ್ಿಗಳನ್ನು ನೀಡುವ ಮಹಾ ವಾಕ್ಯವಿದು! ಇಲ್ಲಿರುವ ಪ್ರತಿಯೊಂದು ಶಬ್ದವೂ ಅನುಭವದ ಅಡಿಗಲ್ಲಿನ ಮೇಲೆ ಅರಿವಿನ ಅನುಪಮ ಸ್ಪಷ್ಟ ಬೆಳಕಿನಲ್ಲಿ ಹೇಗೆ ಕಂಗೊಳಿಸುತ್ತಿದೆ.

ಸರ್ವಾತ್ಮ ದರ್ಶನದ ಪರಾಕಾಷ್ಠೆಯನ್ನು ಮುಟ್ಟಿದ ಶಾಶ್ವತ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡ ಪರಮ ಕಾರುಣಿಕರು ನೀಡಿದ ಉದ್ಬೋಧಕ ವಾಣಿ ಇದು. ಆಧುನಿಕ ಯುಗದಲ್ಲಿ ಋಷಿಕುಲಕ್ಕೆ ಸೇರಿದ, ಆ ದಿವ್ಯ ಅನುಭೂತಿಯನ್ನು ತಲಸ್ಪಶರ್ಿಯಗಿ ಪಡೆದುಕೊಂಡು ಎಲ್ಲ ತೆರನಾದ ಸಂಶಯ, ವ್ಪರೀತ ಭಾವನೆಗಳನ್ನು ಮೆಟ್ಟಿ ಮೇಲೇರಿ ಮನುಷ್ಯನಾಗಿ ಗೋಚರಿಸುವ ಪ್ರತಿಯೊಬ್ಬ ವ್ಯಕ್ತಿಯ ಹಿನ್ನೆಲೆಯಲ್ಲಿರುವ ಆತ್ಮನ ಪರಮ ವೈಭವವನ್ನು ದಿಕ್ತಟಗಳು ಮೊಳಗುವಂತೆ ಉದ್ಘೋಷಿಸಿದವರು ವೀರವೇದಾಂತಿ ಸ್ವಾಮಿ ವಿವೇಕಾನಂದರು. ಧರ್ಮ ಎಂದರೆ ಸಾಕ್ಷಾತ್ಕಾರ, ಅನುಭೂತಿ, ಬರಿಯ ಶ್ರವಣ ಮಾಡುವುದಷ್ಟೇ ಅಲ್ಲ, ಕೆಲವೊಂದು ಯಾಂತಿಕ ಆಚರಣೆಯೇ ಅಲ್ಲ. ನಂಬಿಕೆ ಮಾತ್ರವಲ್ಲ, ಧಾಮರ್ಿಕ ಸಂಸ್ಥೆಗಳ ಸದಸ್ಯನಾಗಿ ಬಿಡುವುದೇ ಅಲ್ಲ. ಅದು ಬದುಕಿನಲ್ಲಿ ಪರಿಪೂರ್ಣ ಪರಿವರ್ತನೆಯನ್ನುಂಟು ಮಾಡುವ ಅಂತರ್ದೃಷ್ಟಿ, ಅನುಭೂತಿ, ಅಜ್ಞಾನದ ಕತ್ತಲೆಯನ್ನು ನಾಶಮಾಡುವ ಅರಿವಿನ ಬೆಳಕಿನಲ್ಲಿ ಅತ್ಯಂತ ಸ್ಪಷ್ಟ ಅನುಭವ, ಇತ್ತೀಚಿನ ಮತಧರ್ಮಗಳು ಉದಿಸುವುದಕ್ಕೆ ನಾಲ್ಕುಸಾವಿರ ವರ್ಷಗಳ ಹಿಂದೆ ಈ ದೇಶದಲ್ಲಿ 'ಪ್ರ-ನಂ ಬ್ರಹ್ಮ' 'ಏಕಂ ಸತ್ ವಿಪ್ರಾಃ ಬಹುಧಾ ವದಂತಿ' ಎಂಬ ತ್ರಿಕಾಲಾಬಾಧಿತ ಸತ್ಯವನ್ನು ಸ್ವಾನುಭವದಿಂದ ಕಂಡುಕೊಂಡು ಜಗತ್ತಿಗೆ ಸಾರಿದ ವಿಶ್ವಧರ್ಮದ ಸಂದೇಶ ಅದು.

ದೃಢ ಭಕ್ತಿಯ ನೆಲೆ, ಸೆಲೆ

ಸಕಲ ಮತಧರ್ಮಗಳನ್ನೂ ಸಹನೆಯಿಂದ ಗೌರವದಿಂದ ನೋಡುವ, ಪ್ರತ್ಯಕ್ಷಾನುಭವದ ಅಡಿಗಲ್ಲಿನ ಮೇಲೆ ನಿಂತಿದೆ. ಭಾರತದಲ್ಲಿ ಉದಿಸಿದ ಈ ಋಷಿವಾಣಿ. ಮಧ್ಯಪ್ರಾಚ್ಯದಲ್ಲಿ ಉದಯಿಸಿದ ಯಹೂದಿ, ಕ್ರೈಸ್ತ, ಇಸ್ಲಾಂ ಮತಗಳಲ್ಲಿ, ಬಗವಂತನಲ್ಲಿ ನಂಬಿಕೆ, ನೀತಿ ನಿಯಮ ಪರಿಪಾಲನೆ ಮತ್ತು ಧಾಮರ್ಿಕ ಸಂಸ್ಥೆಯ ಸದಸ್ಯತ್ವವೇ ಮೊದಲಾದವು ಮನುಷ್ಯನನ್ನು ಸ್ವರ್ಗರಾಜ್ಯ ಪ್ರವೇಶಕ್ಕೆ ಕರೆದೊಯ್ಯಲು ಸಾಕಾಉತ್ತದೆ. ಆದರೆ ಈ ನೆಲದ ಧಾಮರ್ಿಕ ಭಾವನೆಯು ನೀತಿ ನಿಯಮಗಳ ಪಾಲನೆ, ಭಗವಂತನಲ್ಲಿ ಶ್ರದ್ಧೆ ಸದಾಚಾರಗಳ ಮೂಲಕ ದೇಹತ್ಯಾಗದ ಬಳಿಕ ದಿವ್ಯ ಲೋಕಗಳಲ್ಲಿ ಉನ್ನತ ಸ್ಥಾನ ಪಡೆಯಲು ಸಹಕಾರಿಯಾದರೂ ಅಜ್ಞಾನ, ಅಹಮಿಕೆ, ದೇಹಾತ್ಮಬುದ್ಧಿ ಮತ್ತು ತೃಷ್ಣೆಯೇ ಮುಂತಾದ ಬಂಧನಗಳಿಂದ ಬಿಡುಗಡೆಯಾಗದು, ಕನ್ನಡನಾಡಿನ ಸಂತಶ್ರೇಷ್ಠರಾದ ಕನಕದಾಸರು ಹೇಳುವಂತೆ 'ಬಂದು ಬಂದು ಭ್ರಮೆಗೊಂಡು ಮಾಯಾಮೋಹಕ್ಕೆ ಸಿಲುಕಿ ನೊಂದು ಬೆಂದು ಒದ್ದಾಡುವ ಸ್ಥಿತಿ' ತಪ್ಪುವುದಿಲ್ಲ; ಬೇಕಾದುದು ಸತ್ಯಸಾಕ್ಷಾತ್ಕಾರದಿಂದ ಬರುವ ಸ್ವಾನುಭವ ವಿಜ್ಞಾನ. ಅದನ್ನು ಪಡೆಯುವ ಪ್ರಯತ್ನದಲ್ಲೇ ಎಲ್ಲ ಧರ್ಮಗಳ ಮೂಲ ಇರುವುದು, ಪಶ್ಚಿಮ ದೇಶಗಳ ಅಸ್ತಿತ್ವದ ಎಲ್ಲ ಪರಿಮಿತಿಗಳಿಂದಲೂ ಪಾರಾಗುವ ವಿಧಾನ ಇರುವುದು ಇಲ್ಲೇ.

ರಕ್ತ ಮಾಂಸ ನರವ್ಯೂಹಗಳಿಂದ ಕೂಡೀದ ಪರಮಾದ್ಭುತ ಯಂತ್ರವಾದ ಮನುಷ್ಯ ಶರೀರದಲ್ಲಿ ದಿವ್ಯತೆಯಂತೂ ಸದಾ ಸುಪ್ತವಾಗಿದೆ. ಎಂತಹ ಕೀಳರಿಮೆಯಿಂದ ಕರಟಿಹೋದವನೂ ಮೇಲೇಳಲು ಬೇಕಾದ ಸರ್ವಶಕ್ತಿಯೂ ಅಲ್ಲಿ ಅಡಗಿದೆ. ಆ ಸಕ್ತಿಯಲ್ಲಿಡುವ ವಿಶ್ವಾಸವೇ ಅದನ್ನು ವ್ಯಕ್ತಗೊಳಿಸಲು ಸಹಕಾರಿಯಾಗುತ್ತದೆ. ಪ್ರಕೃತಿಯ ನಿಯಮಗಳನ್ನು ಕಂಡುಹಿಡಿದು ಅದನ್ನು ನಿಯಂತ್ರಿಸುವ ಮಾನವನ ಸಾಮರ್ಥ್ಯದಲ್ಲಿ ಈ ಶಕ್ತಿ ವ್ಯಕ್ತವಾಗುತ್ತಿದೆಯಷ್ಟೇ. ಮಾನವನ ಒಳಗಣ ಈ ದಿವ್ಯತೆ ಪ್ರಕೃತಿ ಶಕ್ತಿಯನ್ನೂ ಪ್ರಕೃತಿ ನಿಯಮಗಳನ್ನೂ ಮೀರಿ ನಿಲ್ಲಬಲ್ಲದು, ಮಾನವನ ಅಗಾಧ ಅಪಾರ ಸಾಧ್ಯತೆಯ ಬಗ್ಗೆ ಇದು ಆಶ್ವಾಸನೆ ನೀಡುತ್ತದೆ. ಆತ್ಮಸ್ವರೂಪದ ಅರಿವಿನಿಂದ ಮನುಷ್ಯ ಅದ್ಭುತ ಅಪಾರ ಸಾಮರ್ಥ್ಯವನ್ನು ಪಡೆಯುತ್ತಾನೆ

ಎನ್ನುತ್ತದೆ ಉಪನಿಷತ್. ಯಾರ ಯಾವ ಸಹಾಯವೂ ಇದಕ್ಕೆ ಸಮನಾದುದಲ್ಲ. ಅದೆಲ್ಲವೂ ಅಸ್ಥಿರ, ಅಶಾಶ್ವತ, ಪರಾಧೀನ, ಮರವನ್ನು ಅತಿಕ್ರಮಿಸಿ ನಿಭರ್ ೀತಿಯ ಪರಾಕಷ್ಠೆಯನ್ನು ಏರುತ್ತಾನೆ ಆತ್ಮಜ್ಞಾನಿ ಎಂದು ಆತ್ಮಶಕ್ತಿಯ ತೇಜವನ್ನು ಆತ್ಮಜ್ಞಾನದ ವೈಭವವನ್ನು ಸಾರುತ್ತವೆ ಉಪನಿಷತ್ತುಗಳು.

ಈಗಿನ ಕಾಲದ ಒಂದು ಆವಶ್ಯಕ ವಿಷಯವನ್ನು ನಿಮಗೆ ಜ್ಞಾಪಿಸುವೆನು. ಮಹಾಭಾರತದ ಕರ್ತೃವಾದ ವ್ಯಾಸನಿಗೆ ಧನ್ಯವಾದ. ಅವನು ಕಲಿಯುಗದಲ್ಲಿ ದಾನವೊಂದೇ ಧರ್ಮ ಎಂದು ಸಾರಿರುವನು. ತಪಸ್ಸು ಕಠಿಣ ಯೋಗ ಈ ಯುಗದಲ್ಲಿ ಸಾಧ್ಯವಿಲ್ಲ. ಇತರರಿಗೆ ಸಹಾಯಮಾಡುವ ಧರ್ಮ ಇಂದು ಬೇಕಾಗಿದೆ. ದಾನವೆಂದರೇನು? ಎಲ್ಲಾ ದಾನಗಳಿಗಿಂತ ಶ್ರೇಷ್ಠವಾದುದು ಜ್ಞಾನದಾನ. ಅನಂತರ ವಿದ್ಯಾದಾನ. ಅನಂತರ ಪ್ರಾಣ ದಾನ. ವಸ್ತ್ರ ಅನ್ನ ಪಾನಾದಿಗಳು ಎಲ್ಲವುಗಳಿಗಿಂತ ಕನಿಷ್ಠ ದಾನಗಳು. ಯಾತು ಅಧ್ಯಾತ್ಮ ವಿದ್ಯೆಯನ್ನು ದಾನ ಮಾಡುವರೋ ಅವರು ಜೀವಿಗಳನ್ನು ಹಲವು ಜನ್ಮಗಳಿಂದ ಪಾರು ಮಾಡುವರು. ಯಾರು ಲೌಕಿಕ ವಿದ್ಯೆಯನ್ನು ದಾನ ಮಾಡೂವರೋ ಅವರು ಅಧ್ಯಾತ್ಮಜ್ಞಾನದ ಕಡೆ ಜನರ ಗಮನವನ್ನು ಸೆಳೆಯುತ್ತಾರೆ. ಉಳಿದ ದಾನಗಳೆಲ್ಲಾ ಇದಕ್ಕಿಂತ ಕನಿಷ್ಠ. ಪ್ರಾಣ ದಾನ ಕೂಡ ಇದಕ್ಕಿಂತ ಕೆಳಗಿನದು. ಅದಕ್ಕಾಗಿಯೇ ಇದನ್ನು ತಿಳಿದುಕೊಳ್ಳುವುದು ಅವಶ್ಯಕ.

ಅಧ್ಯಾತ್ಮದಾನಕ್ಕಿಂತ ಉಳಿದವೆಲ್ಲಾ ಕನಿಷ್ಠ. ಶ್ರೇಷ್ಠವಾದ ಅಮೋಘವಾದ ದಾನವೇ ಆಧ್ಯಾತ್ಮಿಕ ವಿದ್ಯೆಯನ್ನು ಜನರಿಗೆ ಹಂಚುವುದು. ನಮ್ಮ ಶಾಸ್ತ್ರದಲ್ಲಿ ಎಂದಿಗೂ ಬತ್ತದ ಆಧ್ಯಾತ್ಮಿಕ ಚಿಲುಮೆ ಇದೆ. ಈ ಪುಣ್ಯಭೂಮಿಯನ್ನು ಬಿಟ್ಟರೆ ಮತ್ತೆಲ್ಲಿಯೂ ಅಧ್ಯಾತ್ಮವನ್ನು ಅಷ್ಟರಮಟ್ಟಿಗೆ ಅನುಷ್ಠಾನ ದಲ್ಲಿ ಇಟ್ಟಿರುವಂತಹ ಉದಾಹರಣೆ ದೊರುಕುವುದಿಲ್ಲ. ಇಂತಹ ಭಾವನೆಗಳು, ಇಂತಹ ಉದಾತ್ತವಾದ ನಿದರ್ಶನಗಳು ನಮ್್ಮ ದೇಶದಲ್ಲಿರುವಾಗ, ಯೋಗಿಗಳು ಬುದ್ಧಿ ಹೃದಯಗಳಲ್ಲಿ ಇರುವ ಇಂತಹ ಅನರ್ಘ್ಯ ರತ್ನಗಳು ಶ್ರೀಮಂತರ, ಬಡವರ, ಪಂಡೀತ ಪಾಮರರ, ಉಚ್ಚನೀಚರ ಸರ್ವಸಾಮಾನ್ಯ ಆಸ್ತಿಯಾಗದೆ ಇರುವುದು ಅತ್ಯಂತ ಶೋಚನೀಯ. ಭರತಖಂಡಕ್ಕೆ ಮಾತ್ರವಲ್ಲ, ಪ್ರಪಂಚದ ಮೂಲೆಮೂಲೆಗಲಲ್ಲೂ ಇದನ್ನು ಸಾರಬೇಕು. ಇದು ನಮ್ಮ ಪರಮ ಕರ್ತವ್ಯಗಳಲ್ಲಿ ಒಂದು. ನೀವು ಮತ್ತೊಬ್ಬರಿಗೆ ಹೆಚ್ಚು ಸಹಾಯ ಮಾಡಿದಷ್ಟೂ ಅದರಿಂದ ನಿಮಗೇ ಉಪಯೋಗ. ನೀವು ನಿಜವಾಗಿಯೂ ನಿಮ್ಮ ಧರ್ಮವನ್ನು ಪ್ರೀತಿಸುವುದಾದರೆ, ದೇಶವನ್ನು ಪ್ರೀತಿಸುವುದಾದರೆ, ನಿಮ್ಮ ಪವಿತ್ರ ಗ್ರಂಥಗಳಲ್ಲಿ ಹುದುಗಿರುವ ರತ್ನಗಳನ್ನು ತಂದು ಅವನ್ನು ಯೋಗ್ಯ ಜನರಿಗೆ ಹರಡುವುದಕ್ಕೆ ದುಡಿಯುವುದು ನಿಮ್ಮ ಆದ್ಯ ಕರ್ತವ್ಯ.

ಪ್ರತಿಯೊಬ್ಬ ಸ್ತ್ರೀ ಪುರುಷರನ್ನು ದೇವರಂತೆ ನೋಡಿ. ನೀವು ಯಾರಿಗೂ ಸಹಾಯಮಾಡಲಾರಿರಿ. ಬೇಕಾದರೆ ನೀವು ಸೇವೆ ಮಾಡಬಹುದು. ನಿಮಗೆ ಆ ಭಾಗ್ಯ ಬಂದರೆ ನೀವು ಭಗವಂತನ ಮಕ್ಕಳನ್ನು ಪೂಜಿಸಬಹುದು, ಆತನನ್ನು ಪೂಜಿಸಬಹುವು. ಭಗವಂತನು ತನ್ನ ಮಕ್ಕಳ ಸೇವೆಗೆ ನಿಮಗೆ ಅವಕಾಶ ಒದಗಿಸಿ ಕೊಟ್ಟರೆ ನೀವೇ ಧನ್ಯರು ಎಂದು ಭಾವಿಸಿ. ನಿಮ್ಮ ಸಮಾನವಿಲ್ಲವೆಂದು ಭಾವಿಸಬೇಡಿ. ಆ ಸದವಕಾಶ ಇತರರಿಗೆ ದೊರೆಯದೆ ಇರುವಾಗ ನಿಮಗೆ ದೊರೆತುದಕ್ಕೆ ನೀವೇ ಧನ್ಯರು. ದೇಶಭಕ್ತಿಯ ವಿಷಯವಾಗಿ ಮಾತನಾಡುವರು. ನನಗೂ ದೇಶಭಕ್ತಿಯಲ್ಲಿ ವಿಶ್ವಾಸವಿದೆ. ದೇಶಭಕ್ತಿಯನ್ನು ಕುರಿತಂತೆ ನನ್ನದೇ ಆದ ಒಂದು ಆದರ್ಶವಿದೆ.

ಮಹತ್ಕಾರ್ಯಸಾಧನೆಗೆ ಮೂರು ವಿಷಯಗಳು ಅತ್ಯಾವಶ್ಯಕ. ಮೊದಲನೆಯದೇ ಹೃದಯವಂತಿಕೆ. ಬುದ್ಧಿಯಲ್ಲಿ ಮತ್ತು ವಿಚಾರಶಕ್ತಿಯಲಿ ಏನಿದೆ? ಕೆಲವು ಹೆಜ್ಜೆಗಳು ಹೋಗಿ ಅಲ್ಲಿ ನಿಲ್ಲುವುವು. ಸ್ಫೂತರ್ ಬರುವುದು ಹೃದಯದಿಂದ. ಪ್ರೇಮವು ಅಸಾಧ್ಯವಾದ ಬಾಗಿಲನ್ನೂ ತೆರೆಯುವುದು. ಪ್ರಪಂಚದ ರಹಸ್ಯಕ್ಕೆಲ್ಲಾ ಪ್ರೇಮವೇ ಬಾಗಿಲು. ಭಾವೀ ದೇಶ ಭಕ್ತರೇ, ಸಮಾಜ ಸುಧಾರಕರೇ, ಮೊದಲು ದೇಶಭಕ್ತಿಯನ್ನು ಹೃದಯದಲ್ಲಿ ಅನುಭವಿಸಿ. ಕೋಟ್ಯಂತರ ದೇವಸಂತಾನರು ಮತ್ತು ಋಷಿಸಂತಾನರು ಪಶುಸಂತಾನರಾಗಿರುವರೆಂದು ನಿಮಗೆ ಹೃದಯದಲ್ಲಿ ವ್ಯಥೆ ಇದೆಯೇ, ಕೋಟ್ಯಂತರ ಜನರು ಈಗ ಉಪವಾಸದಿಂದ ನರಳುತ್ತಿರುವರು, ಹಿಂದಿನಿಂದಲೂ ಕೋಟ್ಯಂತರ ಜನರು ಅದರಿಂದ ನರಳುತ್ತಿದ್ದರು ಎಂಬುದು,

## -: REFERENCES:-


- ಸ್ವಾಮಿ ವಿವೇಕಾನಂದ - ಕೃತಿಶ್ರೇಣಿ ಸಂಪುಟ 3,
- ಕನ್ನಡ ಮಾಸ ಪತ್ರಿಕೆ
- **Internet**